**ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಳಲ್ಕೆರೆ**

**ಸಿ.ಸಿ. ನಂ : 1038/2020**

ಪ್ರ.ವ.ಬೋ ದಿ. :29.11.2022 ಪಿಡಬ್ಲ್ಯು :2

ಸಿಡಬ್ಲ್ಯು :2

**ಮುಂದುವರೆದ ಪಾಟೀಸವಾಲು : ಆರೋಪಿಪರ ಶ್ರೀ ಆರ್.ಎಸ್. ವಕೀಲರಿಂದ**

ಚಾಸಾ:1 ನನ್ನ ಗಂಡ. ಚಾಸಾ:3 ನನ್ನ ಮೈದುನನ ಹೆಂಡತಿ. ಚಾಸಾ:5 ನನ್ನ ಮೈದುನ. ಚಾಸಾ:4 ನನ್ನ ತಾಯಿ. ಚಾಸಾ:6 ಮತ್ತು 7 ನನ್ನ ಸಂಬಂಧಿಕರು. ನಾವೆಲ್ಲರೂ ಒಂದೇ ಕುಟುಂಬದವರು ಎಂದರೆ ಸರಿ. ಆರೋಪಿಗಳಿಗೂ ಮತ್ತು ನಮಗೂ ಮೊದಲಿನಿಂದಲೂ ಮಾತುಕತೆ ಇಲ್ಲ ಎಂದರೆ ಸರಿ. 4 ರಿಂದ 6ನೇ ಆರೋಪಿತರ ಕುಟುಂಬಕ್ಕೂ ನಮಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿ. ಗಲಾಟೆ ನಡೆಯುವ ಸಮಯದಲ್ಲಿ ಎಷ್ಟು ಜನ ಸೇರಿದ್ದರು ಎಂದು ಹೇಳಲು ಆಗುವುದಿಲ್ಲ. ನೆಲ್ಲಿಗುಂಡಿ ತೆಗೆಸಲು ನಾವು ಪರವಾನಿಗೆ ಪಡೆದಿರಲಿಲ್ಲ. ನೆಲ್ಲಿಗುಂಡಿ ಕೆಲಸವನ್ನು ಪಂಚಾಯತಿಯಿಂದ ಮಾಡಲಾಗುತ್ತದೆ ಎಂದರೆ ಸರಿ. ನಮ್ಮ ಮನೆಯ ಅಕ್ಕ ಪಕ್ಕ ವಾಸದ ಮನೆಗಳಿವೆ ಎಂದರೆ ಸರಿ. ಗಲಾಟೆ ನಡೆಯುವ ಸಮಯದಲ್ಲಿ ಹಾಜರಿದ್ದ ನಮ್ಮ ಅಕ್ಕ ಪಕ್ಕದ ಮನೆಯವರ ಹೆಸರು ಹೇಳಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ನನ್ನ ಗಂಡನ ಜೀವ ಉಳಿಸಿಕೊಳ್ಳುವುದೇ ದೊಡ್ಡದಾಗಿತ್ತು, ಹಾಗಾಗಿ ನಾನು ಯಾರು ಹಾಜರಿದ್ದರು ಎಂದು ಗಮನಿಸಿರುವುದಿಲ್ಲ ಎನ್ನುತ್ತಾರೆ. ಸ್ಥಳದ ಚೆಕ್ಕುಬಂದಿ ಹೇಳಲು ಆಗುವುದಿಲ್ಲ. ಚಾಸಾ:3 ರವರ ಸರವನ್ನು ಕಿತ್ತುಕೊಂಡ ವಿಚಾರವನ್ನು, 1 ರಿಂದ 3ನೇ ಆರೋಪಿತರು ನನ್ನನ್ನು ಕಣಿಗೆಯನ್ನು ಹೊಡೆದಿರುವ ವಿಚಾರಗಳನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಯಾವ ದಿನಾಂಕದಂದು ಪೋಲಿಸರು ನನ್ನ ಹೇಳಿಕೆ ಪಡೆದಿರುತ್ತಾರೆಂದು ನನಗೆ ಹೇಳಲು ಆಗುವುದಿಲ್ಲ. 1ನೇ ಆರೋಪಿಯು ಚಾಸಾ:1 ರವರ ತಲೆಯ ನೆತ್ತಿಯ ಭಾಗಕ್ಕೆ ಕುಡುಗೋಲಿನಿಂದ ಹೊಡೆದಾಗ ಅವರ ಬಟ್ಟೆಗಳಿಗೆ ರಕ್ತದ ಕಲೆಯಾಗಿತ್ತು. ಆರೋಪಿತರು ಯಾರ್ಯಾರು ನಮಗೆ ಏನೇನು ಬೈದರು ಎಂದು ಹೇಳಲು ಆಗುವುದಿಲ್ಲ. 1ನೇ ಆರೋಪಿ ನಮ್ಮ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣವು ಇದೇ ನ್ಯಾಯಾಲಯದಲ್ಲಿದ್ದು, ಅದರ ಸಂಖ್ಯೆ 1026/2020 ಆಗಿದ್ದು, ಇದು ಚಾಲ್ತಿಯಲ್ಲಿದೆ ಎಂದರೆ ಸರಿ. 1ನೇ ಆರೋಪಿಯು ಚಾಸಾ:5 ರವರ ವಿರುದ್ಧ ಸಿ.ಸಿ.

1017/20 ಪ್ರಕರಣವು ಇದೇ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದೆ ಎಂದರೆ ಸರಿ. 2ನೇ ಆರೋಪಿಯು ನಮ್ಮ ವಿರುದ್ಧ ಪಾಲು ವಿಭಾಗ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯ ಸೇಡಿನ ಮೇಲೆ ನಾನು ನಾವು ಈ ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮೂರಿನಿಂದ ಹೊಸದುರ್ಗ ರೋಡಿಗೆ 3 ಕಿ.ಮೀ. ಇದ್ದು, ಅಲ್ಲಿ ಸರಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ನಮ್ಮೂರಿನಿಂದ ಹೊಳಲ್ಕೆರೆಗೆ 25 ರಿಂದ 30 ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ನಾವು ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿ ಮಧ್ಯೆ ಗಲಾಟೆ ಆಯಿತು, ಆರೋಪಿತರು ಹಲ್ಲೆ ಮಾಡಿದರು, 1ನೇ ಆರೋಪಿ ಚಾಸಾ:1ರವರಿಗೆ ತಲೆಯ ನೆತ್ತಿಯ ಭಾಗಕ್ಕೆ ಕುಡುಗೋಲಿನಿಂದ ಹೊಡೆದರು, ಆರೋಪಿಗಳು ನಮಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಎಲ್ಲ ವಿಚಾರಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ :

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ